## ಇಲ್ಲಿಯವರೆಗೆ



ಗಫಾರ್‌ಖಾನ್ ಇದ್ದ ಕೋಣೆ ಬಹಳ ಸಣ್ಣದಾಗಿತ್ತು. ಕಾಲು ಚಾಚುವುದಕ್ಕೂ ಜಾಗವಿರಲಿಲ್ಲ. ಬಾಗಿಲ ಪಕ್ಕದಲ್ಲಿ ಗೋಡೆಯಲ್ಲೊಂದು ರಂಧ್ರವಿತ್ತು. ಅದರ ಮೂಲಕ ದಿನಕ್ಕೆ ಎರಡು ಸಾರಿ ಸಣ್ಣ ತಟ್ಟೆಯೊಂದು ಒಳಗೆ ಬರುತ್ತಿತ್ತು. ತಟ್ಟೆಯಲ್ಲಿ ಅನ್ನದ ಮುದ್ದೆ ಇರುತ್ತಿತ್ತು. ಅದನ್ನು ತಿನ್ನುವ ಪ್ರಯತ್ನ ಮಾಡುತ್ತಿದ್ದನು. ಆದರೆ ಅದು ದಕ್ಕದೆ ವಾಂತಿಯಾಗಿ ಬಿಡುತ್ತಿತ್ತು. ಒಂದು ಗ್ಲಾಸ್ ನೀರು, ಇನ್ನು ಬೇರೆ ಯಾವುದಕ್ಕೂ ನೀರಿರುತ್ತಿರಲಿಲ್ಲ. ಎಲ್ಲವೂ ಆ ಕೋಣೆಯಲ್ಲೇ.

ಅವನಿಗೆ ಸ್ವಲ್ಪ ಸ್ವಲ್ಪವಾಗಿ ಹುಚ್ಚು ಹಿಡಿಯುತ್ತಿತ್ತು. ಮಿಜ್ರಾಡಿನ್‌ನ ಟೆಕ್ನಿಕ್ ಅದು. ರಹಸ್ಯಗಳನ್ನು ಕಕ್ಕಿಸುವುದಕ್ಕೆ ಮೊದಲು ಕೈದಿಗೆ ಹುಚ್ಚು ಹಿಡಿಯುವಂತೆ ಮಾಡುವುದು! ಆತನ ಕಾಲುಗಳಲ್ಲಿ ಸ್ವಾಧೀನವೂ ಇರಲಿಲ್ಲ. ಅಲ್ಲಿ ಮಿಜ್ರಾಡಿನ್‌ನ ಬಲಗೈ ಬಂಟ ಇರ್ಫಾನ್ ಬಿಟ್ಟರೆ ಬೇರೆ ಯಾರೂ ಇರುವುದಿಲ್ಲ.

ಇತ್ತ ಕಲ್ಯಾಣಿ ಮನೆಯ ಮುಂದೆ ಗಿಡಗಳಿಗೆ ನೀರು ಚಿಮುಕಿಸುತ್ತಾ ಇರುತ್ತಾಳೆ. ಪ್ರೇಮ್ ಬಂದು 'ಕಂಗ್ರಾಟ್ಸ್' ಎನ್ನುತ್ತಾನೆ. ಏಕೆ ಎಂದರೆ 'ನಿಮ್ಮ ತಂದೆ ಕ್ಷೇಮವಾಗಿರುವ ವಿಷಯ ತಿಳಿದದ್ದಕ್ಕೆ ಎನ್ನುತ್ತಾನೆ. ಜತೆಗೆ 'ನಿನ್ನಿಂದ ಒಂದು ಕಿಸ್ ಬೇಕು' ಎನ್ನುತ್ತಾನೆ ಪ್ರೇಮ್. 'ನಿನ್ನನ್ನು ನೋಡಿದ್ರೆ ವಾಂತಿ ಬರ್ತದೆ' ಎನ್ನುತ್ತಾಳೆ ಕಲ್ಯಾಣಿ. ಪ್ರೇಮ್‌ಗೆ ಎರಿಟೋಮೇನಿಯಾ ಎಂಬ ಮಾನಸಿಕ ವ್ಯಾಧಿ ಎಂಬ ಅಭಿಪ್ರಾಯ ಬರುತ್ತದೆ.

ಅದಾಗಿ ಕೃಷ್ಣ ಬರುತ್ತಾನೆ. ಒಂಬತ್ತು ಗಂಟೆ ಫ್ಲೈಟ್‌ಗೆ ಮುಂಬಯಿಗೆ ಹೋಗುವುದಾಗಿ, ಏನಾದರೂ ಬೇಕಿದ್ದರೆ ಪ್ರೇಮ್‌ಗೆ ಕೇಳು ಎಂದು ಕಲ್ಯಾಣಿಗೆ ಹೇಳಿ ಹೋಗುತ್ತಾನೆ.

ಫ್ರೆಂಡ್ಸ್‌ನೆಲ್ಲ ಪೊಲೀಸರು ಕರೆದುಕೊಂಡು ಹೋಗಿ ಇಂಟರಾಗೇಟ್ ಮಾಡುತ್ತಿದ್ದಾರೆ. ಆ ಪೊಲೀಸ್ ಆಫೀಸರ್‌ನ ಸಾಯಿಸಿ, ಅವನ ಹೆಂಡತೀನ ಪಿಸ್ತೂಲ್‌ನಿಂದ ಬೆದರಿಸಿ ಕರೆದುಕೊಂಡು ಹೋದ ವಿಷಯ ಅವರಿಗೆ ತಿಳಿಯಿತು. ರಕ್ತದಲ್ಲಿ ನಿನ್ನ ಫಿಂಗರ್ ಪ್ರಿಂಟ್ಸ್ ಕೂಡಾ ಸಿಕ್ಕಿವೆ' ಎಂದನು.

'ಫಿಂಗರ್ ಪ್ರಿಂಟ್ಸ್ ಸಿಕ್ಕಿವೆಯಾ? ರಕ್ತದಲ್ಲಿ ಅವಳ ಫಿಂಗರ್ ಪ್ರಿಂಟ್ಸ್ ಸಿಕ್ಕಿವೆಯಾ?' ಕಲ್ಯಾಣಿಯ ಕಡೆ ಓರೆನೋಟ ಬೀರಿ ಕೇಳಿದನು.

'ಅವಳದಲ್ಲ, ನಿನ್ನದು. ಪೊಲೀಸರು ನಿನಗೋಸ್ಕರ ಎಲ್ಲಾ ಕಡೆ ಹುಡುಕುತ್ತಾ ಇದ್ದಾರೆ. ಷೂಟ್ ಅಟ್ ಸೈಟ್ ಆರ್ಡರ್ ಆಗಿದೆ. ನೀನು ಹುಷಾರಾಗಿರು' ಸರ್ವೇಶ್ವರ್ ಎನ್ನುತ್ತಿರುವಾಗ ಪ್ರೇಮ್ 'ಏನು? ಷೂಟ್ ಅಟ್ ಸೈಟಾ? ಸರಿ ಅವಳಿಗೆ ತಿಳಿಸ್ತೀನಿ ಬಿಡು' ಎಂದು ಫೋನ್ ಇಟ್ಟನು.

ಅಲ್ಲಿಯವರೆಗೆ ಅವನ ಮಾತು ಕೇಳುತ್ತಿದ್ದ ಕಲ್ಯಾಣಿ 'ಏನಾಯ್ತು' ಎಂದು ಕೇಳಿದಳು.

'ರೂಂನಲ್ಲಿ ನಿನ್ನ ಫಿಂಗರ್ ಪ್ರಿಂಟ್ಸ್ ಸಿಕ್ಕಿವೆಯಂತೆ, ನಿನ್ನ ಬಾಯ್‌ಫ್ರೆಂಡ್ ಜೊತೆ ಸೇರಿ ನೀನೇ ಗಂಡನ್ನ ಸಾಯಿಸಿದ್ದೀಯ ಅಂತ ಪೊಲೀಸರು ತಿಳಿದಿದ್ದಾರೆ'

ಅವಳ ಮುಖ ಬಾಡಿತು. 'ಆದರೆ ನಾನು ಸಾಯಿಸಲಿಲ್ಲವಲ್ಲ?' ಎಂದಳು.

'ಆ ವಿಷಯ ನನಗೆ ಗೊತ್ತು, ನಿನಗೆ ಗೊತ್ತು, ಪೊಲೀಸರಿಗೆ ಗೊತ್ತಿಲ್ಲವಲ್ಲ? ಸತ್ತು ಹೋಗಿರುವುದು ಒಬ್ಬ ಪೊಲೀಸ್ ಆಫೀಸರ್, ಅವರ ಕಲೀಗ್. ಅವರು ನಿನಗೋಸ್ಕರ ಷೂಟ್ ಅಟ್ ಸೈಟ್ ಆರ್ಡರ್ ಮಾಡಿದ್ದಾರಂತೆ' ಎಂದನು.

'ಈಗೇನು ಮಾಡಬೇಕು?' ದೈನ್ಯತೆಯಿಂದ ಕೇಳಿದಳು.

'ನೀನು ಗಲಾಟೆ ಮಾಡದಿದ್ದರೆ ನಮ್ಮ ಬಗ್ಗೆ ಯೋಚಿಸುತ್ತೇನೆ. ಇಲ್ಲದಿದ್ದರೆ ಹೊರಟು ಹೋಗು. ನಿನ್ನ ದಾರಿ ನಿನ್ನದು, ನನ್ನ ದಾರಿ ನನ್ನದು...'

ಅವಳು ಯೋಚನೆಯಲ್ಲಿ ಮುಳುಗಿದಳು. ಅವನು ಅವಳ ಕಡೆಯೇ ನೋಡುತ್ತಿದ್ದನು. ಅವನ ಯೋಚನೆಯೇ ಬೇರೆ. ಹೊರಟು ಹೋಗುವ ಮೊದಲು ಅವಳನ್ನೊಮ್ಮೆ ಅನುಭವಿಸಬೇಕು. ನಂತರ ಅವಳನ್ನು ಕೂಡ ಸಾಯಿಸಿ ಪೊಲೀಸರ ಹತ್ತಿರ ಯಾವುದೋ ಕಥೆ ಹೇಳಬಹುದು. ಆ ಮೊದಲೇ ಒಂದು ಕೊಲೆ ಮಾಡಿದ್ದ ಅವನಿಗೆ ಇದು ಹೊಸದಾಗಿರಲಿಲ್ಲ.

ಅವನು ಹಾಗೆ ಯೋಚಿಸುತ್ತಿದ್ದಾಗ ಅವಳು 'ಮೊದಲು ಫೋನ್‌ನಿಂದ ಬ್ಯಾಟರಿ ತೆಗೆದು ಬಿಡು, ಫ್ರೆಂಡ್ಸ್ ಫೋನ್ ಮಾಡಿದರೆ ಪೊಲೀಸರು ಟ್ರ್ಯಾಕ್ ಮಾಡುತ್ತಾರೆ' ಎಂದಳು.

ಅವನ ಮುಖ ಅರಳಿತು, 'ಗುಡ್, ಬಹಳ ಬುದ್ಧಿವಂತೆ. ನಿನ್ನಂತಹವರು ಪಕ್ಕದಲ್ಲಿದ್ದರೆ ಈ ರಾಜ್ಯವೇ ಅಲ್ಲ ದೇಶವನ್ನೇ ದಾಟಿ ಹೋಗಬಹುದು' ಎನ್ನುತ್ತಾ ಎದ್ದು ನಿಂತನು.

'ನಾವೆಲ್ಲಿಗೆ ಹೋಗಲು ಸಾಧ್ಯ? ಎಲ್ಲ ಕಡೆ ಪೊಲೀಸರು ಹುಡುಕುತ್ತಾ ಇರುತ್ತಾರಲ್ಲ?'

'ಮೊದಲು ಈ ರಾಜ್ಯ ದಾಟಬೇಕು. ಆಮೇಲೆ ದೇಶ. ಅಂದ ಹಾಗೆ ನಿಮ್ಮಪ್ಪ ದೇಶ ತೊರೆದು ಹೋದನಂತೆ ಅಲ್ಲವೇ?'

'ನಿನಗ್ಯಾರು ಹೇಳಿದರು?'

'ಎಲ್ಲರೂ ಮಾತಾಡಿಕೊಳ್ಳುತ್ತಿದ್ದಾರೆ, ಪ್ರಾಣ ಉಳಿಸಿಕೊಳ್ಳುವುದಕ್ಕೆ ಪಾಕಿಸ್ತಾನ್‌ಗೆ ಓಡಿಹೋದ ಅಂತ'

'ನನ್ನ ತಂದೆ ದೇಶಕ್ಕೋಸ್ಕರ ಪ್ರಾಣ ಕೊಡ್ತಾರೆ, ಪ್ರಾಣಕ್ಕೋಸ್ಕರ ದೇಶವನ್ನು ತೊರೆಯುವಂತವರಲ್ಲ, ಇನ್ಯಾವತ್ತೂ ಅವರ ಬಗ್ಗೆ ಕೆಟ್ಟದಾಗಿ ಮಾತಾಡಬೇಡ' ಎಂದಳು ಅವನ ಬೈಕ್ ಹತ್ತುತ್ತಾ.

ಅರ್ಧಗಂಟೆ ಪ್ರಯಾಣ ಮಾಡಿದರು. ಇನ್ನೇನು ಕರ್ನಾಟಕ ಬಾರ್ಡರ್ ಬಂತು ಎನ್ನುವಾಗ ಪೆಟ್ರೋಲ್ ತೀರಿ ಹೋಯಿತು.

'ಈ ರಾತ್ರಿ ಇಲ್ಲಿಯೇ ಇರೋಣ. ಏನು ಮಾಡಬೇಕೋ ಬೆಳಿಗ್ಗೆ ಯೋಚಿಸಿದರಾಯಿತು' ಎಂದನು. ಅವಳು ಮಾತನಾಡಲಿಲ್ಲ.

ಅವನು ಒಣಗಿದ ಕಡ್ಡಿಗಳನ್ನು ತಂದು ಬೆಂಕಿ ಹಚ್ಚಿದನು. ಅವಳಿನ್ನೂ ಅದೇ ಮೂಡ್‌ನಲ್ಲಿರುವುದನ್ನು ಕಂಡು 'ಏನು ಯೋಚಿಸುತ್ತಿದ್ದೀಯ?' ಎಂದು ಕೇಳಿದನು.

'ನಿನಗೆ ಅಪ್ಪ ಇದ್ದಾನಾ?'

'ಇಲ್ಲ, ನನಗೆ ಹದಿನೈದು ವರ್ಷ ಆಗಿದ್ದಾಗ ಸತ್ತು ಹೋದನು', ಸುಳ್ಳು ಹೇಳಿದನು.